ಶ್ರೀ ಪಂಪಾಪತಿ —ಸ್ವಾಮಿ, ''ದಾವಣಗೆರೆ ನಗರದಲ್ಲಿ ಪೂರ್ಣ ಪ್ರಮಾಣದ ಒಳಚರಂಡಿಯ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ'', ಎಂಬ ನನ್ನ ಪ್ರಶ್ನೆಗೆ ತಾವು, ''ಸರ್ಕಾರದ ಗಮನಕ್ಕೆ ಬಂದಿದೆ'' ಎಂದು ಹೇಳಿದ್ದೀರಿ. ಕಳೆದ ೭-೮ ವರ್ಷಗಳ ಹಿಂದೆ ಪೈಪ್ ಹಾಕಿದ್ದಾರೆ ಆದರೆ ಡಿಸ್ಟ್ರಿಬ್ಯೂಷನ್ ಲೈನ್ ಹಾಕಿಲ್ಲ. ಇದನ್ನು ಕೂಡಲೇ ಮಾಡಿಸಿಕೊಡುತ್ತೀರಾ? ಇಲ್ಲದೇ ಹೋದರೆ ಈ ಚರಂಡಿ ವಾಸನೆ ದಾವಣಗೆರೆ ನಗರಕ್ಕೆಲ್ಲಾ ಸುತ್ತಿಕೊಂಡು ಬಹಳ ತೊಂದರೆಯಾಗುತ್ತದೆ.

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.— ಈಗಾಗಲೇ ಈ ಒಳಚರಂಡಿ ಕೆಲಸ ತ್ವರಿತವಾಗಿ ನಡೆಯುತ್ತಿದೆ. ತಾವು ಹೇಳಿದಂತೆ ಕೆಲವು ಕಡೆ ಸ್ಕೂರೇಜ್ ನೀರನ್ನು ಹೊರಕ್ಕೆ ಬಿಡುವ ಕೆಲಸ ಆಗಿಲ್ಲ ಎಂಬುದು ಗೊತ್ತಿದೆ. ಆದಷ್ಟು ಜಾಗ್ರತೆ ಈ ಕೆಲಸವನ್ನು ಮಾಡಿಸಿಕೊಡುತ್ತೇವೆ.

ಶ್ರೀ ಪಂಪಾಪತಿ.— ಸ್ವಾಮಿ, ದಾವಣಗೆರೆ ನಗರಕ್ಕೆ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಇದಕ್ಕಾಗಿ ಒಂದು ಕೆರೆಯನ್ನು ಕಟ್ಟುತ್ತಿದ್ದಾರೆ. ಆದರೆ ಛಾನಲ್‌ನಿಂದ ಈ ಕೆರೆಗೆ ನೀರನ್ನು ಬಿಟ್ಟುಕೊಂಡು ಈಗಲೇ ಸ್ಟಾಕ್ ಮಾಡಿಕೊಂಡರೆ ಮುಂದೆ ದಾವಣಗೆರೆ ನಾಗರೀಕರಿಗೆ ನೀರನ್ನೊದಗಿಸಲು ಅನುಕೂಲವಾಗುತ್ತದೆ. ಈ ಕೆಲಸವನ್ನು ತಾವು ಮಾಡಿಸಿಕೊಡುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ —ಈ ವಿಷಯವನ್ನು ಈ ಮೊದಲೇ ಒಂದು ಸಾರಿ ನನ್ನ ಗಮನಕ್ಕೆ ತಂದಿದ್ದಿರಿ. ಅಲ್ಲದೆ ನಾನೂ ಕೂಡ ಈ ಬಗ್ಗೆ ಆದೇಶ ಕೊಟ್ಟಿದ್ದೇನೆ. ಮತ್ತು ಛಾನಲ್‌ನಿಂದ ನೀರನ್ನು ಕೆರೆಗೆ ತುಂಬಿಸಿ ನೀರನ್ನು ನಿಲ್ಲಿಸುವ ವ್ಯವಸ್ಥೆ ಮಾಡೋಣ.

ಶ್ರೀ ಪಂಪಾಪತಿ.—ಸ್ವಾಮಿ, ಛಾನಲ್ ನೀರು ನಿಲ್ಲುವುದರೊಳಗೆ ಕೆರೆಯ ವ್ಯವಸ್ಥೆ ಆಗಬೇಕು ಇಲ್ಲದಿದ್ದರೆ ಮುಂದೆ ನಗರದ ನಾಗರೀಕರಿಗೆ ನೀರನ್ನೊದಗಿಸುವುದು ಕಷ್ಟವಾಗುತ್ತದೆ ಹಿಂದೆ ಒಂದು ಸಾರಿ ಒಂದು ಡ್ರಂ ನೀರಿಗೆ ೬ ರೂ. ಎಂದು ಮಾಡಿ ನಗರದ ಮರ್ಯಾದೆಯನ್ನು ಕಳೆದಿದ್ದಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ದಾವಣಗೆರೆಯಲ್ಲಿ ನೀರಿನ ಕ್ಷಾಮವನ್ನು ನೀವೇ ಉಂಟುಮಾಡುತ್ತಿದ್ದೀರಿ. ನಿಮ್ಮಲ್ಲಿ ವರ್ಷದ ೧೧ ತಿಂಗಳೂ ಸಮೃದ್ಧವಾಗಿ ನೀರು ಇರುತ್ತದೆ. ಇನ್ನು ಒಂದು ತಿಂಗಳು ಮಾತ್ರ ಸ್ವಲ್ಪ ಕಷ್ಟವಾಗಬಹುದು. ಆದರೂ ನಿಮಗೆ ಆ ಒಂದು ತಿಂಗಳೂ ತೊಂದರೆಯಾಗದಂತೆ ವ್ಯವಸ್ಥೆ ಮಾಡಿಸುತ್ತೇವೆ.

Time bound programme for Completion of Hemavathy Project.

981 SRI. H. T. KRISHNAPPA (Nagamangala)—Will the Chief Minister be pleased to state :-

(a) whether the Government is having a time bound programme to complete the Hemavathy Project;

(b) what is the extent of the area in Nagamangala Taluk and other taluks of Mandya District planned to be brought under Irrigation?

SRI. D. DEVARAJ URS.(Chief Minister)—

(a) Yes, Hemavathy Project is proposed to completed by June 1989.

(b)

(a)	Nagamangala Taluk	97,000	Acres.
(b)	Krishnarajapet Taluk	54,440	,,
(c)	Mandya Taluk	32,000	,,
(d)	Pandavapura Taluk	42,000	,,
	Total :	2,25,440	Acres

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ಮಂಡ್ಯ ಜಿಲ್ಲೆಯಲ್ಲಿ ನಿರಂತರವಾಗಿ ಕ್ಷಾಮಕ್ಕೆ ತುತ್ತಾಗ ತಕ್ಕ ಪ್ರದೇಶಗಳು ಯಾವುವು ಇವೆ ಅವುಗಳಿಗೆ ಹೇಮಾವತಿ ನದಿ ನೀರನ್ನು ಕೊಡುವ ತೀರ್ಮಾನ ಸರ್ಕಾರ ಮಾಡಿದೆಯೆ? ನಮ್ಮ ಭಾಗದ ಜನ ನಿಮ್ಮನ್ನು ಪೂಜ್ಯಾರ್ಹವಾದ ವ್ಯಕ್ತಿಯ ನ್ನಾಗಿ ಮಾಡಿಕೊಂಡಿದ್ದಾರೆ. ತಾವು ನನ್ನ (ಅ) ಪ್ರಶ್ನೆಗೆ ಉತ್ತರಿಸುತ್ತಾ ''ಹೇಮಾವತಿ ಯೋಜನೆಯನ್ನು ೧೯೮೯ನೇ ಜೂನ್ ತಿಂಗಳ ಹೊತ್ತಿಗೆ ಪೂರ್ತಿಗೊಳಿಸಲು ಉದ್ದೇಶಿಸಲಾಗಿದೆ'' ಎಂದು ಹೇಳಿದ್ದೀರಿ ನಾನು ಕೆಲವು ಇಂಜಿನಿಯರ್ ಗಳಿಂದ ತಿಳಿದ ಪ್ರಕಾರ ನಾಗಮಂಗಲ ಮತ್ತು ಇತರ ಭಾಗಗಳಿಗೆ ೧೯೮೩–೮೪ನೇ ಇಸವಿಯೊಳಗಾಗಿ ನೀರನ್ನೊದಗಿಸಲು ಸಾಧ್ಯವಾಗುತ್ತದೆ ಇದು ಸಾಧ್ಯವಾಗುವುದಾದರೆ ತಾವು ಈ ಕಾಮಗಾರಿಯನ್ನು ೧೯೮೩–೮೪ರ ಹೊತ್ತಿಗೆ ಮುಗಿಸುತ್ತೀರಾ?

† ಶ್ರೀ ಡಿ ದೇವರಾಜ ಅರಸ್ —೧೯೮೩ ೮೪ರ ಹೊತ್ತಿಗೆ ಈ ಯೋಜನೆ ಮುಗಿಸಬಹುದೆಂದು ನಿಮಗೆ ಯಾವ ಇಂಜಿನಿಯರ್‌ಗಳು ಹೇಳಿದರೋ ಅದೇ ಇಂಜಿನಿಯರ್‌ಗಳೇ ನಮಗೂ ೧೯೮೯ರ ಹೊತ್ತಿಗೆ ಮುಗಿಯುತ್ತದೆಂದು ಹೇಳಿದ್ದಾರೆ. ಒಂದು ವೇಳೆ ನಿಮಗೆ ಯಾರಾದರೂ ಅನಧಿಕೃತವಾಗಿ ಹೇಳಿದ್ದರೆ ಆ ಮಾತುಗಳಿಗೆ ಕಿವಿ ಕೊಡಬೇಡಿ. ನಾನು ಇಲ್ಲಿ ಹೇಳಿರುವಂತೆ ೨,೨೫,೪೪೧ ಎಕರೆ ಜಮೀನಿಗೆ ಪೂರ್ಣವಾಗಿ ನೀರನ್ನು ಕೊಡಬೇಕಾದರೆ ೧೯೮೯ರವರೆಗೂ ಆಗುತ್ತದೆ. ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಿಕೊಂಡು ಹೋಗುತ್ತೇವೆ. ಇಲ್ಲಿ ೧೯೮೯ಕ್ಕೆ ಮುಗಿಯುತ್ತವೆಂದು ಏತಕ್ಕೆ ತಿಳಿಸಿದ್ದೇವೆಂದರೆ ಈ ಪ್ರಾಜೆಕ್ಟ್ ಒಂದಕ್ಕೆ ಕನಿಷ್ಟ ಎಂದರೂ ಈಗ ೩೬ರ್ಚು ಮಾಡಿರುವುದನ್ನು ಬಿಟ್ಟು ಇನ್ನೂ ೧೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದಕ್ಕೆ ಇಷ್ಟು ಹಣವನ್ನು ಒಟ್ಟಿಗೇ ಒದಗಿಸುವುದಕ್ಕಾಗುವುದಿಲ್ಲ. ಹಂತಹಂತವಾಗಿ ಒದಗಿಸಬೇಕಾಗುತ್ತದೆ. ಆದ್ದರಿಂದಲೇ ಈ ಪ್ರಾಜೆಕ್ಟ್ ಪೂರ್ಣವಾಗಿ ಆಗಬೇಕಾದರೆ ೧೯೮೯ನೇ ಇಸವಿಯ ವರೆಗೂ ಆಗುತ್ತದೆಂದು ಹೇಳಿದ್ದೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ಬಾಗೂರು ಮತ್ತು ನವಿಲೆ ಸುರಂಗ ಮಾರ್ಗ ಮುಗಿದ ಮೇಲೆ ಹೇಮಾವತಿ ಎಡದಂಡೆಯಿಂದ ನಾಗಮಂಗಲ ಮತ್ತು ತುಮಕೂರು ಉಪ ನಾಲೆಗಳಾಗುತ್ತವೆಂದ್ರು ತಿಳಿದು ಬಂದಿದೆ. ಆಲ್ಲದೆ ಈ ಕೆಲಸವೂ ಕೂಡ ಆರಂಭವಾಗಿದೆ ಎಂದು ತಿಳಿದು ಬಂದಿದೆ: ತುಮಕೂರ್ ಜಿಲ್ಲೆಯಲ್ಲಿರುವ ತುರುವೇಕೆರೆಗೆ ಅಂಟಿಕೊಂಡಂತೆ ಇರುವ ನಾಲೆಗಳ ಉಪ ವಿಭಾಗಗಳನ್ನು ತೆರೆಯುತ್ತೀರಾ?

ಎರಡನೆಯದಾಗಿ ತುಮಕೂರು ವಿಭಾಗದ ಅಚ್ಚುಕಟ್ಟು ಮತ್ತು ಅದಕ್ಕೆ ಆಗತಕ್ಕ ಖರ್ಚು, ಹಾಗೆಯೇ ನಾಗಮಂಗಲ ವಿಭಾಗದ ಅಚ್ಚುಕಟ್ಟು ಮತ್ತು ಅದಕ್ಕೆ ಆಗತಕ್ಕ ಖರ್ಚು ಎಷ್ಟು ಎಂಬುದನ್ನು ಹೇಳುತ್ತೀರಾ?

ಶ್ರೀ ಡಿ. ದೇವರಾಜ ಅರಸ್ —ತಾವು ಕೇಳಿದಂತೆ ಎಲ್ಲ ವಿವರಗಳನ್ನೂ ಇಲ್ಲಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಚನ್ನರಾಯಪಟ್ಟಣದ ಕಡೆಯಿಂದ ಬರತಕ್ಕ ನಾಲೆಯಿಂದ ಒಂದು ಉಪ ನಾಲೆ ಬರುತ್ತದೆ. ನಾಗಮಂಗಲ ಕವರ್ ಮಾಡುವುದಕ್ಕೆ ಎಡಭಾಗದ ನಾಲೆಯಿಂದಲೂ ನಿಮ್ಮ ಕಡೆಗೆ ಬರುತ್ತದೆ. ಈ ನಾಲೆ ಹುಲಿಕಟ್ಟೆಯ ಹತ್ತಿರ ಬಂದು ನಿಲ್ಲುತ್ತದೆ. ಈಗ ಈ ನಾಲೆಯನ್ನೇ ಮುಂದುವರಿಸಬೇಕೆ? ಅಥವಾ ಬೇರೆ ನಾಲೆಯನ್ನೇ ತೆಗೆಯಬೇಕೆ? ಎಂಬುದನ್ನು ಪರಿಶೀಲಿಸುತ್ತಿದ್ದೇವೆ.

ಶ್ರೀ ಹೆಚ್. ಡಿ. ಚೌಡಯ್ಯ.—ಮಂಡ್ಯ ಜಿಲ್ಲೆಯ ೪ ತಾಲ್ಲೂಕುಗಳಲ್ಲಿ ಎರಡೂವರೆ ಲಕ್ಷ ಎಕರೆ ಸಾಗುವಳಿಯಾಗುತ್ತದೆಂದು ಹೇಳಿದ್ದೀರಿ. ಆದರೆ ಪರಫಾರ್ಮೆನ್ಸ್ ಬಡೆ ಟ್‌ನಲ್ಲಿ ೫೩ ಸಾವಿರ ಎಕರೆ ಎಂದು ಕೊಟ್ಟಿದ್ದೀರಿ. ಇದು ಏನು ಎಂಬುದನ್ನು ಹೇಳುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಈಗ ಸದ್ಯಕ್ಕೆ ೫೩ ಸಾವಿರ ಎಕರೆಗೆ ನೀರನ್ನು ಕೊಡುವುದಕ್ಕೆ ಸಾಧ್ಯ ವಾಗಬಹುದೆಂದು ನಾನು ಹೇಳಿದ್ದೇನೆ. ಆದರೆ ಇಲ್ಲಿ ನನ್ನ ಉತ್ತರದಲ್ಲಿ ಹೇಳಿರುವುದು, ಈ ನಾಲೆ ಪೂರ್ತಿ ಯಾಗುವ ಹೊತ್ತಿಗೆ ಎರಡೂವರೆ ಲಕ್ಷ ಎಕರೆಗೆ ನೀರು ಕೊಡಲು ಸಾಧ್ಯವಾಗುತ್ತದೆ ಎಂದು. ಇಲ್ಲಿ ನಾಲೆಯನ್ನು ತೆಗೆದುಕೊಂಡು ಹೋದಂತೆಲ್ಲಾ, ನೀರನ್ನೂ ಕೊಡುತ್ತಾ ಹೋಗುತ್ತೇವೆ.